AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ಸೋಲಿಗರ ಸಾಹಿತ್ಯ-ಸಂಸ್ಕೃತಿಯಲ್ಲಿ ಪ್ರಾಣಿಪ್ರಪಂಚ

**ವೀರಣ್ಣ ಎಂ. ಡಿ.**
ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು
ಮೊ. ಸಂ: 9902438928
ಇ-ಮೇಲ್: veerusoliga@gmail.com

ಸೋಲಿಗರ ಬದುಕಿನ ಭಾವಾಭಿವ್ಯಕ್ತಿಗೆ ಅಡವಿಯ ವಸ್ತುವಿಷಯಗಳೇ ಆಕರಗಳು. ತಾವು ಕಾನನದ ಮಡಿಲಿನಲ್ಲಿ ಗ್ರಹಿಸಿದ ಅಂತರಾಳದ ತುಡಿತಗಳನ್ನು ಸಾಹಿತ್ಯ, ಸಂಸ್ಕೃತಿಯಲ್ಲಿ ಸಮರ್ಪಕವಾಗಿ ಅಡಕಗೊಳಿಸಿ ಪ್ರಕೃತಿಯ ಅರಿವನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸುತ್ತಾ ಬಂದಿದ್ದಾರೆ. ಅರಣ್ಯದಲ್ಲಿಯ ಪ್ರಾಣಿಗಳ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವುಗಳನ್ನು ತಮ್ಮ ಭಾವಕೋಶದೊಳಗೆ ಶೇಖರಿಸುತ್ತಾ ನಿತ್ಯಜೀವನದ ಸಹಜ ಒಡನಾಟವನ್ನು ಹೊಂದಿರುವುದು ಬೆರಗುಗೊಳಿಸುವಂತಹದು.

ಆಧುನಿಕ ಮಾನವನು ಪ್ರಾಣಿಗಳೊಂದಿಗೆ ತನ್ನದೇ ಆದ ಬಾಂಧವ್ಯ ಹೊಂದಿದ್ದು, ಕತ್ತೆ, ಕುದುರೆ, ಹಸು, ಕುರಿ, ಮೇಕೆ, ನಾಯಿ, ಬೆಕ್ಕು ಇತ್ಯಾದಿ ಹಲವಾರು ಜೀವಿಗಳನ್ನು ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಸಾಕುತ್ತಾನಾದರೂ ಭಾವನಾತ್ಮಕ ನಂಟನ್ನು ಬೆಸೆದುಕೊಂಡಿರುತ್ತಾನೆ. ಕಾನನ ವಾಸಿಗಳಾದ ಸೋಲಿಗರಲ್ಲೂ ಪ್ರಾಣಿಗಳನ್ನು ಸಾಕುವ ಕಲೆಗಾರಿಕೆಯಿದೆ. ಅವುಗಳನ್ನು ಮನೆಯ ಮಕ್ಕಳಂತೆ ಪ್ರೀತಿಸಿ ಪೋಷಿಸುತ್ತಾರೆ. ತಮ್ಮ ಗೀತೆಗಳಲ್ಲಿ ಪ್ರಾಣಿಗಳನ್ನು ಕುರಿತು ನುಡಿಯುತ್ತಾರೆ.

ಸೋಲಿಗರ ಸಾಂಪ್ರದಾಯಿಕ ಗೋರುಕಾನ ಗೀತೆಯಲ್ಲಿ ಅಡವಿಯ ಪರಿಚಯದೊಂದಿಗೆ ಪ್ರಾಣಿಪ್ರಪಂಚವನ್ನು ಚಿತ್ರಿಸಿದ್ದಾರೆ.

ಗೆಜ್ಜಲಕ್ಕಿ ಮರ ಕಾಡಿನಲ್ಲಿ
ಗೆಜ್ಜಲು ತಿಂದಾದೆ ಕಾಲವೆಲ್ಲ
ಅಂಡರಸಿಕಟ್ಟೆ ದಾರೀಲಿಲಾ
ಈ ತಂಡ ತಂಡೆಲ್ಲ ಸಾಕಾನೆಲ
ತುಂಬಿ ಬೆಟ್ಟದ ದಾರೀಲಿಲಾ
ತುಂಬಿತಲೆಲ ಸೋವ್ವಾನೆಲ
ಸೊಳ್ಳೆ ಸೋಬಟ್ಟೆ ದಾರೀಲಿಲಾ
ಸೊಳ್ಳೆಯ ಕಾಟ ಗನಕಾಟಲಾ
ಬೆಗತ್ತ ಮಾಡಿ ನೀ ಗೆಲೆನೆಲಾ
ಗೆದ್ದಲೆ ಗೆಲುಮೆ ನಿನ್ನದೆಲ
ಗೋರು ಗೋರುಕ ಗೋರುಕಾನ[1]

ಹಬ್ಬದ ಸಂದರ್ಭದಲ್ಲಿ ಕಾಡಿಗೆ ಓಡಿ ಹೋಗುವ ಗಂಡು ಹೆಣ್ಣು ಕಾಲದ ಪರಿವೆ ಇಲ್ಲದೆ ಪ್ರಣಯದಲ್ಲಿ ಮೈಮರೆಯುವ ರೂಪಕವನ್ನು ಗೀತೆಯಲ್ಲಿ ಕಟ್ಟಿದ್ದಾರೆ. ಸೋಲಿಗ ನುಡಿಯಲ್ಲಿ ಗೆಜ್ಜಲು ಎಂದರೆ ಗೆದ್ದಲು ಹುಳು, ಸಂಸ್ಕೃತದಲ್ಲಿ ಇದನ್ನು ಕಾಷ್ಠಹರಿಕ ಎಂದು ಕರೆಯುತ್ತಾರೆ. ಗೆದ್ದಲು ಹುಳುಗಳು ಅರಣ್ಯದಲ್ಲಿರುವ ಸಸ್ಯಸಂಕುಲಗಳನ್ನು ತಿನ್ನುತ್ತವೆ. ಚೈತನ್ಯಹೀನವಾದ ಜೀವಿಗಳನ್ನು ಸಹ ತಿನ್ನುತ್ತವೆ. ಗೆದ್ದಲು ಹುಳುಗಳಿಗೆ ರೆಕ್ಕೆ ಬಂದು ಹಾರುವುದರಿಂದ 'ಗೆಜ್ಜಲಕ್ಕಿ' ಎಂದು ಕರೆದಿದ್ದಾರೆ. ಮಣ್ಣಿನಲ್ಲಿ ಗೆದ್ದಲು ಗೂಡನ್ನು ಕಟ್ಟಿಕೊಳ್ಳುವಂತೆ ಹೊಸ ಬದುಕಿಗಾಗಿ ಹವಣಿಸುತ್ತ ಹಕ್ಕಿಯಂತೆ ಹಾರುವ ಪ್ರೇಮಿಗಳಿಬ್ಬರು ಗೆದ್ದಲಿನಂತೆ ಅರಣ್ಯದಲ್ಲಿ ಆಶ್ರಯವನ್ನು ಕಂಡುಕೊಳ್ಳಬೇಕು. ಲೋಕದ ಹಂಗಿಲ್ಲದೆ ಬರೀ ಸರಸದಲ್ಲೇ ಮೈಮರೆತರೆ ಕಾಲದ ಕೂಪಕ್ಕೆ ಬಲಿಯಾಗಬೇಕಾಗುತ್ತದೆ. ಆದುದರಿಂದ ಕಾಲದ ಪರಿಯನ್ನು ಅರಿತು ವಾಸಿಸಲು ಯೋಗ್ಯವಾದ ತಾವನ್ನು ಅರಸಿಕೊಂಡು ಗುಡಿಸಲು ಕಟ್ಟಿಕೊಳ್ಳಬೇಕು. ಪ್ರೀತಿಯ ಸತ್ವ ಮತ್ತು ಶಕ್ತಿಯನ್ನು ಸಾಂಕೇತಿಕವಾಗಿ ನಿರೂಪಿಸಲು ಗೆದ್ದಲು ಹುಳುವಿನ ರೂಪಕವನ್ನು ನೀಡಿದ್ದಾರೆ. ಆನೆ ನಡೆದದ್ದೆ ದಾರಿ ಎಂಬಂತೆ ನವಜೋಡಿಗಳು ತಮ್ಮಿಚ್ಛೆಯಂತೆ ಬದುಕಿನ ಮಾರ್ಗ ಕಂಡುಕೊಳ್ಳುವ ಪರಿಯನ್ನು ಗೀತೆಯಲ್ಲಿ ಆನೆಯನ್ನು ಪ್ರತಿಮೆಯಾಗಿ ತಂದಿದ್ದಾರೆ. ಹೀಗೆ ಅಡವಿಯಲ್ಲಿ ಜೀವನವನ್ನು ಕಟ್ಟಿಕೊಂಡ ಸಂಗಾತಿಗಳಿಬ್ಬರು ಅರಣ್ಯದ ಸೊಬಗನ್ನು ಸವಿಯುತ್ತ ಪರಿಸರದ ಜ್ಞಾನವನ್ನು ಪಡೆಯುತ್ತಾರಲ್ಲದೆ, ಆಹಾರಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡುವ ಕ್ರಮಗಳನ್ನು ಕಲಿಯುತ್ತಾರೆ. ದಾಂಪತ್ಯ ಜೀವನದಲ್ಲಿ ಯಾರ ಹಂಗಿಲ್ಲದೆ ಬದುಕುವುದನ್ನು ಮೈಗೂಡಿಸಿಕೊಂಡರೂ ಸೊಳ್ಳೆಗಳಂತೆ ತೊಂದರೆ ಕೊಡುವ ಜನರೂ ಇರುತ್ತಾರೆ. ಅಂತಹವರ ಉಪಟಳದಿಂದ ತಪ್ಪಿಸಿಕೊಂಡು ದಾಂಪತ್ಯ ಜೀವನ ಸಾಗಿಸಿದರೆ ಸಂಗಾತಿಗಳಿಗೆ ಜೀವನದ ಗೆಲುವು ಸಿದ್ಧಿಸಿದಂತೆಯೆ ಸರಿ.

ಸೋಲಿಗರ ಮತ್ತೊಂದು ಸಾಂಪ್ರದಾಯಿಕ ಗೀತೆ ಹಾಡುಕೆ, ಹಬ್ಬದ ರಾತ್ರಿ ದೇವರ ಮುಂದೆ ಕುಳಿತು ಹೇಳುವ ಕಥನ ರೂಪದ ಗೀತೆಗಳೆ ಹಾಡುಕೆಗಳು. ಇವರು ಪ್ರಾಣಿಬೇಟೆಗಾಗಿ ಕಾಡಿಗೆ ತೆರಳಿದಾಗ ಸಂಭವಿಸಿದ ದುರಂತವನ್ನು ಹಾಡುಕೆಯಲ್ಲಿ ಬಣ್ಣಿಸಿದ್ದಾರೆ.

ದೊಡ್ಡೋ ಮೇಯಾರೆ ದೊಡ್ಡಾಲ

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

ಅಲ್ಲಿ ಬೂರುಕಿ ನಿಂತಾದೇ
ದೊಡ್ಡೋ ಮೇಯಾರೆ ದೊಡ್ಡಾಲ
ಅಲ್ಲಿ ಕಲ್ಲು ಕಾಡಳಿಯೋ
ದೊಡ್ಡೋ ಮೇಯಾರೆ ದೊಡ್ಡಾಲ
ಅಲ್ಲಿ ಏಳುವ ನಾಯಿಯದೇ
ದೊಡ್ಡೋ ಮೇಯಾರೆ ದೊಡ್ಡಾಲ
ಅದು ನಾಲಗೆ ಸವರಿದಾದೇ
ದೊಡ್ಡೋ ಮೇಯಾರೆ ದೊಡ್ಡಾಲ
ಅದು ಬೀರಿಕ್ಕಿ ನಿಂದಾದೆ
ದೊಡ್ಡೋ ಮೇಯಾರೆ ದೊಡ್ಡಾಲ
ಅಲ್ಲಿ ಅಂಚಿಯ ಕಾಡಿನಲಿ
ದೊಡ್ಡೋ ಮೇಯಾರೆ ದೊಡ್ಡಾಲ
ಅದು ಹೊಂಚಾಕಿ ನಿಂದಾದೇ
ದೊಡ್ಡೋ ಮೇಯಾರೆ ದೊಡ್ಡಾಲ
ಅಲ್ಲಿ ಏಳುವ ತವಣಿಯದೇ
ದೊಡ್ಡೋ ಮೇಯಾರೆ ದೊಡ್ಡಾಲ [೨]

ಪ್ರಾರಂಭದಲ್ಲಿ ಚಿಕ್ಕದಾಗಿ ಶುರುವಾದ ಕದನದ ಕಿಚ್ಚು ತನ್ನ ಸುತ್ತಲ್ಲಿರುವವರನ್ನು ಹೇಗೆ ಆವರಿಸಿಕೊಂಡು ವಿನಾಶಕ್ಕೆ ತಳ್ಳಿಬಿಡುತ್ತದೆ ಎಂಬ ಆಶಯವು ವ್ಯಕ್ತವಾಗಿದೆ. ಸೋಲಿಗ ಭಾಷೆಯಲ್ಲಿ ದೊಡ್ಡೋ ಎಂದರೆ ಕಾಟಿ ಅಥವಾ ಕಾಡೆಮ್ಮೆ ಎಂದರ್ಥ. ಕಾಡಿನಲ್ಲಿ ಕಾಟಿಗಳು ವಾಸಿಸುವ ತಾಣಗಳಿಗೆ ದೊಡ್ಡು ಎಂದು ಕರೆಯುತ್ತಾರೆ. ಏಳು ಜನ ಬೇಟೆಗಾರರು ಏಳು ಬೇಟೆ ನಾಯಿಗಳನ್ನು ತಮ್ಮ ಸಂಗಡ ಕರೆದುಕೊಂಡು ಹಳುವಿನ ಹಾದಿಯನ್ನು ಹಿಡಿದಾಗ ಬೃಹತ್ತಾಗಿ ಬೆಳೆದು ನಿಂತಿರುವ ಮರಗಳ ಸಾಲಿನ ನಡುವೆ ಕಾಟಿಗಳ ಸಮೂಹ ಮೇವನ್ನು ಮೇಯುತ್ತಿತ್ತು. ಅವು ಬೇಟೆಗಾರರ ಕಣ್ಣಿಗೆ ಬಿದ್ದು ಕಲ್ಲುಗಳನ್ನು ಎತ್ತಿ ಹೊಡೆದರು. ನಾಯಿಗಳು ಸೂಚನೆ ಅರಿತು ಬೊಗಳತೊಡಗಿದವು. ಬೆದರಿದ ಕಾಟಿಗಳು ಅಡವಿಯೊಳಗೆ ಓಡತೊಡಗಿದವು. ನಾಯಿಗಳು ಬೆನ್ನತ್ತಿದಾಗ ಬೀರಜ್ಜಿ ಎಂಬ ಕೆರೆಯ ಬಳಿಯಲ್ಲಿ ಕಾಟಿಗಳು ಧೀರರಂತೆ ನಿಂತು ನಾಯಿಗಳೊಂದಿಗೆ ಕಾದಾಡಿದವು. ಒಂದಷ್ಟು ಕಾಲ ಸಂಘರ್ಷ ನಡೆದು ಕೊನೆಗೆ ಕಾಟಿಗಳು ಕೆರೆಯಲ್ಲಿ ಮುಳುಗಿದವು. ಅವುಗಳೊಂದಿಗೆ ನಾಯಿಗಳು ಮುಳುಗಿದವು. ಇದನ್ನು ನೋಡಿದ ಬೇಟೆಗಾರರು ನಾಯಿಗಳ ರಕ್ಷಣೆಗೆ ಧಾವಿಸಿ ತಾವೂ ನೀರಿನಲ್ಲಿ ಮುಳುಗಿದರು. ಹೀಗೆ ಕಾಟಿ, ನಾಯಿ, ಬೇಟೆಗಾರರು ಕದನದಲ್ಲಿ ಮರಣವನಪ್ಪಿದರು.

ಮೇಲಿನ ಕಥನದಲ್ಲಿ ಬೇಟೆಗಾರರು ಕದನಕ್ಕೆ ಪ್ರಚೋದಿಸುವ ನಾಯಕರಂತೆಯೂ, ನಾಯಿಗಳು ಬೇಟೆಗಾರರ ಆಜ್ಞೆಯನ್ನು ಅನುಸರಿಸುವ ಮುಗ್ಧ ಜನರ ಪ್ರತಿಮೆಯಂತೆಯೂ ಕಂಡುಬರುತ್ತದೆ. ಆರಂಭದಲ್ಲಿ ಬೇಟೆಗಾರಿಕೆಯ ಉದ್ದೇಶದಿಂದ ಹೊರಟ ಬೇಟೆಗಾರನು, ಬೇಟೆಗಾರಿಕೆಯನ್ನು ಮರೆತು ಕಾಟಿಗಳೊಂದಿಗೆ ಸಂಘರ್ಷಕ್ಕೆ ಧುಮುಕ್ಕುತ್ತಾನೆ. ಕದನದ ಸುಳಿವೇ ಗೊತ್ತಿರದ ಕಾಟಿಗಳು ಅಲ್ಲಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುತ್ತವೆ. ನಾಯಿಗಳು ಇದಕ್ಕೆ ಅವಕಾಶ ನೀಡುವುದಿಲ್ಲ, ಕೊನೆಗೆ ಯುದ್ಧದ ಪರಿಣಾಮವೆಂಬಂತೆ ಲಭಿಸಿದ್ದು ಸಾವು, ನೋವು ಮಾತ್ರ.

ಆಹಾರಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡುವ ಪರಿಯನ್ನು ಸೋಲಿಗರು ಮತ್ತೊಂದು ಹಾಡುಕೆಯಲ್ಲಿ ಸ್ತುತಿಸಿದ್ದಾರೆ.

ಕಟ್ಟಿನ ಕೋವಿ ಕೈಯಲ್ಲಿ
ಹೊಂಚುವ ಬೇಟೆ ಹೋಗಾನೆ
ಮಚ್ಚು ಮಾಳೆ ಹೊತ್ತುರು
ಮುಂದೆ ಆನೆ ಬಂದಾದೆ
ಹಿಂದೆ ಕರಡಿ ಹೋದಾದೆ
ಜೋಡು ಕಡವೆ ಮೇದಾದೆ
ಜೋಡು ಲೇಟ ಒಡೆಯಾನೆ
ಜೋಡು ಕಡವೆ ಬಿದ್ದೋದೋ।
ಜೋಡು ಧೂಪ ಹಿಡಿಯಾನೆ॥[೩]

ಅಡವಿಯ ಪ್ರಾಣಿಗಳ ಹೆಜ್ಜೆ ಗುರುತು, ವಾಸನೆಯ ಜಾಡನ್ನು ಹಿಡಿದು ಇಂತಹದ್ದೇ ಪ್ರಾಣಿಯಿದೆ ಎಂದು ಗುರುತಿಸಿ ಅವುಗಳಿಂದ ಸುರಕ್ಷಿತವಾಗಿ ಕಣ್ಮರೆಯಾಗುತ್ತ ಸಾಗುವ ಚಾಣಕ್ಷತನ ಸೋಲಿಗರಲ್ಲಿದೆ. ಅಂತಹ ಪ್ರಾಣಿಗಳ ಚಲನವಲನದ ಬಗೆಗಿನ ಪರಿಜ್ಞಾನಕ್ಕೆ ಈ ಗೀತೆ ನಿದರ್ಶನವಾಗಿದೆ.

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

ಮರದ ಕೋವಿಯನ್ನು ಕೈಯಲ್ಲಿ ಹಿಡಿದು ಬೇಟೆಗೆ ಹೊರಟ ವ್ಯಕ್ತಿಗೆ ಆನೆ, ಕರಡಿಯ ಸುಳಿವು ದೊರೆತು ಆತ ಅವುಗಳಿಂದ ತಪ್ಪಿಸಿಕೊಂಡು ಮುಂದೆ ಸಾಗಿದಾಗ ಜೋಡಿ ಕಡವೆಗಳು ಮೇಯುತ್ತಿರುವುದು ಕಾಣುತ್ತದೆ. ತಕ್ಷಣ ತುಪಾಕಿಯಿಂದ ಎರಡು ಗುಂಡುಗಳನ್ನು ಹಾರಿಸುತ್ತಾನೆ. ಎರಡು ಕಡವೆಗಳು ಬಿದ್ದು ಸಾಯುತ್ತವೆ. ಅನಂತರ ಬೇಟೆಯನ್ನು ತೆಗೆದುಕೊಂಡು ಬಂದು ಆಹಾರಕ್ಕಾಗಿ ಶೇಖರಿಸುತ್ತಾನೆ.

ಸೋಲಿಗರು ಬಿದಿರಿನ ಬೊಂಬಿನಿಂದ ಕೋವಿಯನ್ನು ಮಾಡಿಕೊಂಡು ಕೆಲವೊಂದು ಬಗೆಯ ಗಿಡಗಳ ಇದ್ದಿಲಿನಿಂದ ಗುಂಡನ್ನು ಹಾರಿಸುವ ಮದ್ದನ್ನು ತಯಾರಿಸಿಕೊಳ್ಳುತ್ತಿದ್ದರು. ಕಡವೆಯಂತಹ ಪ್ರಾಣಿಗಳನ್ನು ಬೇಟೆಯಾಡಿ ಅದರ ಮಾಂಸವನ್ನು ಬೆಂಕಿಯ ಹೊಗೆಯಲ್ಲಿ ಒಣಗಿಸಿ ಸಂಗ್ರಹಿಸಿಟ್ಟುಕೊಂಡು ಬೇಕಾದಾಗ ಕೆಂಡದಲ್ಲಿ ಸುಟ್ಟು ತಿನ್ನುತ್ತಿದ್ದರು. ಇಲ್ಲಿ ಇವರ ಆಹಾರ ತಯಾರಿಕ ಕ್ರಮ ವ್ಯಕ್ತವಾಗಿದೆ.

ಕಾಡಿನಲ್ಲಿ ಓಡಾಡುವಾಗ ಮೃಗಗಳ ದಾಳಿಗೆ ಒಳಗಾಗುವುದನ್ನು ಗೀತೆಯೊಂದರಲ್ಲಿ ತಿಳಿಸಿದ್ದಾರೆ.

ಜೋ ಜೊಮ್ಮನಾಲೆ ಜೋ ನಾಡೇ
ಕೋಣೂರಿನಲ್ಲಿ ಕುಂಭೇಗೌಡ
ಕೊಲ್ಲಿ ಮಲೆಯಲ್ಲಿ ಕೇತೆಗೌಡ
ಆನೆವಳಕೆರೆ ನವಣೆ ಹೊಲ
ಏಗುರನ ಬಾಯಲ್ಲಿ ಮಡ್ಡೋನಾ॥[೪]

ಕುಂಭೇಗೌಡ ಎಂಬುವವನು ಕೋಣೂರಿನ ಅರಣ್ಯ ಪ್ರದೇಶದಿಂದ ಕೊಲ್ಲಿಮಲೆ ಎಂಬ ಅರಣ್ಯ ಪ್ರದೇಶಕ್ಕೆ ಹೋಗುತ್ತಿದ್ದಾಗ 'ಏಗುರ' ಎಂದರೆ ಹುಲಿ. ಅದರ ಬಾಯಿಗೆ ಸಿಲುಕಿ ಸಾವನಪ್ಪಿದ ಸಂಗತಿಯನ್ನು ಇಲ್ಲಿ ಹೇಳಿದ್ದಾರೆ.

ದೇವರನ್ನು ಮೆರವಣಿಗೆ ಮಾಡುವಾಗ ಹೇಳುವ ಪದಗಳಿಗೆ ಸೋಲಿಗರು ಓಲೆಗೆ ಎಂದು ಕರೆಯುತ್ತಾರೆ. ಮಾದೇಶ್ವರನನ್ನು ಕುರಿತು ಹೇಳಿರುವ ಓಲೆಗದಲ್ಲಿ ಪ್ರಾಣಿ ರೂಪಕವನ್ನು ಕೊಟ್ಟಿದ್ದಾರೆ.

ಜಪ್ಪಿನರಕೆ ಪಾದದಲಿ ಜಗ ಜಪ್ಪಿನ ಸತ್ತಿಗೆ ನೆರಳಲ್ಲಿ
ಜಂಗಮರೊಂದಿಗೆ ಜಡೆಲಿಂಗೋಬೀದೆ ಮೆರುದಾವೋ
ಮಾರಮ್ಮ ತೊಟ್ಟವಳೆ ಮಂಡಲದಾವಿನ ಬಣ್ಣಗಳಾ
ಮಾದಪ್ಪ ತೊಟ್ಟವನೆ ತೇರಿನ ಬಣ್ಣಗಳಾ
ಇಬ್ಬರು ಬರುವ ದಾರಿಯಲ್ಲಿ ಒಬ್ಬರು ಬಂದರು ಮಾದೇವ
ಮಲೆಮಾತಾಡಿ ಹುಲಿ ಕರಡಿ ಜೂಜಾಡಿ
ಅಲ್ಲಿ ಕಾಳಿಂಗ ನಾಗ ಮರೆಯಾಯಿತೊ ಮಾದೇವಾ
ಹಗ್ಗದ ಬಲೆಯ ತೆಕ್ಕೊಂಡು ಗಗ್ಗರದಿಂಟೆ ಇಡುಕೊಂಡು
ಒಬ್ಬರೆ ಹೋದರು ಮಾದೇವ ಹೆಬ್ಬುಲಿ ಬೇಟೆ
ತರಗ ಮೆಟ್ಟಿ ತರಗಾರುವಾಗ ಬೊಟ್ಟುಕಿರುಬನೇರುವಾಗ
ಸನ್ನೆ ಮಾಡಿ ಕರೆದರು ಮಾದೇವಾ ಬಣ್ಣದೆಬ್ಬುಲಿಯ
ಇಡಿಗಿಲುಲ್ಲು ಬೋಳಿಯಲ್ಲಿ ಗಿಡುಗನಿಂಡು ಜಲ್ಲೆಂದು
ನೋಡು ನೋಡು ಕೊಂಬೆಲ್ಲಾ ನೂರೊಂದು ಮುಸುವ
ಕಾರ ಮಿಂಚುಕಾರ ಗುಡುಗಲ್ಲಿ ಕರೆದಾರೆಬ್ಬುಲಿಯ
ಕಾಡ ಕಾಂಚಾಳ ಹೊತ್ತೆಯಲ್ಲಿ ನೀಲಕ್ಕಿ ನಿಮ್ಮೊಲೆಗವೋ
ಜಾವದ ಕೋಳಿ ಅಳುಮನಕ್ಕಿ ಕರೆಯಕ್ಕೆ ಬರುತ್ತವರೆ
ಬಾರಣ್ಣ ಬಸುವಣ್ಣನಿಗೆಲ್ಲ ನೀಲಕ್ಕಿ ನಿಮ್ಮೊಲೆಗವೊ
ಬಾಸುವಣ್ಣ ಲುಟ್ಟವರೆ ಕಂಸಾಳದಿಂದ
ಕಂಸಾಳದಿಂದ ಬಾಸುವಣ್ಣ ಲೇಸಾಳದಿಂದ[೫]

ಈ ಗೀತೆಯಲ್ಲಿ ಮಂಡಲದ ಹಾವು, ಹುಲಿ, ಕರಡಿ, ಕಾಳಿಂಗ ಸರ್ಪ, ಹೆಬ್ಬುಲಿ, ಕಿರುಬ, ಗಿಡುಗ, ಮುಸುವ, ಅಳಿಲುಗಳ ರೂಪಕವಿದೆ. ಶಿವತತ್ವವನ್ನು ಪಸರಿಸಿದ ಜಂಗಮರಲ್ಲಿ ಮಹದೇಶ್ವರರೊಬ್ಬರು. ಇಲ್ಲಿಯ ಮಾರಮ್ಮ ಮಾಯೆ ಅಥವಾ ಹೆಣ್ಣಿನ ಸಂಕೇತ, ಮಾಯೆಯ ಹಿಂದೆ ಹೋದರೆ ಕೇಡಾಗುತ್ತದೆ ಎಂಬುದನ್ನು ಮಂಡಲದಾವಿಗೆ ಉಪಮಿಸಿದ್ದಾರೆ. ಮಾದಪ್ಪ ಮಾಯೆಯ ಸೆರೆಯಿಂದ ಬಿಡಿಸಿಕೊಂಡು ಹೊಸ ಸಾಂಸ್ಕೃತಿಕ ಸಂಭ್ರಮಕ್ಕೆ ಕಾರಣನಾದವನು. ಆದುದರಿಂದಲೆ ಮಾದೇವನು ಹೆಣ್ಣಿನ ಸಂಗಡವನ್ನು ತೊರೆದು ಜನರ ಉದ್ಧಾರಕ್ಕಾಗಿ ಏಕಾಂಗಿಯಾಗಿ ಬಂದವನು. ಇಂತಹ ಮಾದೇವನು ಕಾಡಿಗೆ ಆಗಮಿಸಿದಾಗ ಅಲ್ಲಿ ಹುಲಿ, ಕರಡಿಗಳು ಕದನಕ್ಕಿಳಿದಿದ್ದವು. ಹುಲಿ ಹಳದಿ ಮಿಶ್ರಿತ ಕೇಸರಿ ವರ್ಣದ ದೇಹವನ್ನು ಹೊಂದಿರುವ ಪ್ರಾಣಿ, ಕರಡಿ ಕಪ್ಪು ವರ್ಣದ ದೇಹವನ್ನು ಹೊಂದಿರುವ ಪ್ರಾಣಿ. ಕಪ್ಪು ಅಜ್ಞಾನದ ಸಂಕೇತವಾದರೆ, ಹಳದಿ ಮಿಶ್ರಿತ ಕೇಸರಿ (ಬೆಂಕಿಯನ್ನು ಹೋಲುತ್ತದೆ) ಬೆಳಕಿನ ಸಂಕೇತವಾಗುತ್ತದೆ. ಕಾಳಿಂಗ ಸರ್ಪದ ಮೈ ಬಣ್ಣವೂ ಕಪ್ಪು, ಹುಲಿ, ಕರಡಿಗಳ ಜೂಜಾಟದಲ್ಲಿ ಕಾಳಿಂಗ ಸರ್ಪ ಕಾಣೆಯಾಯಿತು ಎಂದಿರುವಲ್ಲಿ ಅಜ್ಞಾನದ ಅಂಶ ಅಳಿದು ಜ್ಞಾನದ ಅಂಶ ಜಗತ್ತನ್ನು ಬೆಳಗಿತು ಎಂಬುದು ಧ್ವನಿತವಾಗಿದೆ.

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

ಸೋಲಿಗರು ಗಿಡಮೂಲಿಕೆ ಔಷಧಿಗಳನ್ನು ಕೊಡುವಾಗ ಮಂತ್ರಗಳನ್ನು ಪಠಿಸುತ್ತಾರೆ. ಅಂತಹ ಮಂತ್ರಗಳಲ್ಲಿ ಚೇಳು, ಎತ್ತು, ಕುದುರೆ, ಹಾವು, ನಾಯಿ ಮುಂತಾದ ಜೀವಿಗಳ ಪ್ರಸ್ತಾಪವಿದೆ.

ಗುರು ಗುರು ಬಾಳಿಗೆ
ಗುರು ಸುರು ಪಾದ ಗುರು ಬಾಳಿಗೆ
ಸೇಳು ಕಚ್ಚಿತು ಸಿರಿಬಾಳೆ
ಏಳೇಳು ಬಣ್ಣಗಳ ಸಿಂಗಿಕಿತ್ತು
ಶಿವನಪಾದ ಕೋಗುರು ಬಾಳಿಗೆ[೬]

ಚೇಳು ಕುಟುಕಿದಾಗ ಕಚ್ಚಿದ ಭಾಗಕ್ಕೆ ಗಿಡಮೂಲಿಕೆಯನ್ನು ಲೇಪಿಸಿ ಚೇಳಿನ ವಿಷ ಇಳಿದು ಹೋಗುವಂತೆ ಶಿವನನ್ನು ಸ್ತುತಿಸಿದ್ದಾರೆ.

ನಾಯಿಯನ್ನು ಕುರಿತು ಹೇಳಿರುವ ಮಂತ್ರವು ಒಗಟಿನ ರೂಪದಲ್ಲಿ ಕಂಡುಬಂದಿದೆ.

ಗುರು ಗುರು ಬಾಳಿಗೆ
ಗುರು ಸುರು ಪಾದ ಗುರುಬಾಳಿಗೆ
ನೀರು ಮೂಕನ ಗಜುಗ ಗಣ್ಣನ
ಸೊಟ್ಟು ಕಿಮಿಯವನ, ಬುರುಡೆತಲೆಯವನ
ಹರಟೆ ಕಿಮಿಯವನ, ಪರಟೆ ಕಿಮಿಯವನ
ಬೌ ಬೌ ಎನ್ನವನ, ಬೀದೆ ಬೀದೆ ತಿರುಗವನ
ಮೂರು ಬಳ್ಳ ಬಳ್ಳವನ, ಡೊಂಕು ಬಾಲದವನ
ಡೊಳರು ಬಾಲದವನ, ಶಂಕಿನ ದನಿಯವನ
ಶಂಕು ಬಾರದಕ ಮುನ್ನ ಮಾದೋಗು[೭]

ನಾಯಿ ಕಡಿದಾಗ ಪಠಿಸುವ ಮಂತ್ರವಿದು. ನಾಯಿಯ ಒಟ್ಟಾರೆ ಚಹರೆ ಇಲ್ಲಿ ಮೂಡಿಬಂದಿದೆ. ನಾಯಿ ವಾಸನೆಯ ಜಾಡನ್ನು ಹಿಡಿಯುವ ಮೂಗನ್ನು, ಗಜುಗದ ಕಾಯಿಯಂತಹ ಕಣ್ಣನ್ನು, ಅಕ್ಕಪಕ್ಕದ ಸಂಗತಿಗಳನ್ನು ಆಲಿಸುವ ಕಿವಿಯನ್ನು ಹೊಂದಿದೆ. ಬೌ ಬೌ ಎನ್ನುತ್ತ ಬೀದಿಗಳಲ್ಲಿ ಓಡಾಡುವ ನಾಯಿಯು ವಿಶ್ವಾಸಕ್ಕೆ ಹೆಸರಾಗಿದ್ದು, ತನ್ನ ಒಡೆಯನನ್ನು ಕಂಡಾಗ ಆತನ ಸುತ್ತ ಸುತ್ತುತ್ತ ತನ್ನ ಡೊಂಕಾದ ಬಾಲವನ್ನು ಅಲುಗಾಡಿಸಿ ಶಂಖದಂತೆ ದನಿಯನ್ನು ಹೊರಡಿಸುತ್ತದೆ ಎನ್ನುವ ವಿಚಾರ ಉಕ್ತವಾಗಿದೆ.

ಉಳುಕು ಸಳುಕು ಏತರ ಮೇಲೆ ಬಂದೆ
ಕಾಳೆತ್ತಿನ ಮೇಲೆ ಬಂದು ಕೆಂಡಗುದುರೆ ಮೇಲೆ
ಇಳಿದೋ ಗುರು ಬಾ ಉರುಬಾಳಿಗೆ
. . . . . . . . . . . . . . . . . . . .
ಕಕ್ಕೆತಾಳಿನ ಕರಿನಾಗ
ಎಕ್ಕದ ತಾಳಿನ ಎಳನಾಗ
ಮುತ್ತುಗದ ತಾಳಿನ ಮುದುನಾಗ[೮]

ಎನ್ನುವ ಮಂತ್ರಗಳಲ್ಲಿ ಗೂಳಿ, ಕುದುರೆ, ಹಾವುಗಳ ಪ್ರಸ್ತಾಪವಿದೆ.

ಸೋಲಿಗರ ಸಾಹಿತ್ಯ ಸಂಸ್ಕೃತಿಯಲ್ಲಿ ಪ್ರಾಣಿಗಳಿಗೆ ಮಹತ್ವದ ಸ್ಥಾನವಿದೆ. ಹುಲಿ, ಆನೆ, ಕುದುರೆ, ಹಸು ಮುಂತಾದ ಪ್ರಾಣಿಗಳಿಗೆ ದೇವರ ಸ್ಥಾನವನ್ನು ನೀಡಿದ್ದು, ಅವುಗಳ ಮೂರ್ತಿಗಳನ್ನು ಆರಾಧಿಸುತ್ತಾರೆ. ಕಾಡುಪ್ರಾಣಿಗಳಿಂದ ರಕ್ಷಣೆ ಪಡೆಯುವ ಮಾರ್ಗೋಪಾಯಗಳನ್ನು ಕಂಡುಕೊಂಡಿದ್ದಾರಲ್ಲದೆ ಅವುಗಳ ಹಾವ–ಭಾವಗಳನ್ನು ಅರಿತು ನಡೆದುಕೊಳ್ಳುವ ವಿಧಾನಗಳನ್ನು ಅಳವಡಿಸಿಕೊಂಡು, ತಮ್ಮಲ್ಲಿ ಪ್ರಾಣಿಗಳು ಒಂದು ಎಂಬ ಭಾವನೆಯಲ್ಲಿ ಜೀವಿಸುತ್ತಾರೆ.

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

**ಅಡಿಟಿಪ್ಪಣಿಗಳು**

1. ಸಿದ್ದೇಗೌಡ (ಸೋಲಿಗ), ಕಾಳಿಕಾಂಬ ಕಾಲೋನಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 65, ದಿನಾಂಕ 26–01–2021.
2. ಬಸವೇಗೌಡ (ಸೋಲಿಗ), ಕಾಳಿಕಾಂಬ ಕಾಲೋನಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 70, ದಿನಾಂಕ 10–12–2019.
3. ಹನುಮೇಗೌಡ (ಸೋಲಿಗ), ಮುತ್ತುಗದ ಗದ್ದೆಪೋಡು, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ, ವಯಸ್ಸು : 80, ದಿನಾಂಕ 03–05–2017.
4. ಬಸವರಾಜು (ಸೋಲಿಗ), ಯರಕನಗದ್ದೆ ಕಾಲೋನಿ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ, ವಯಸ್ಸು : 45, ದಿನಾಂಕ 06–02–2022
5. ಮಾರೆ (ಸೋಲಿಗ), ಭೂತಾಣಿ ಪೋಡು, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು:35, ದಿನಾಂಕ 09–11–2020.
6. ಗರಗನ ಮಾದೇಗೌಡ (ಸೋಲಿಗ), ಕಲ್ಲುದೊಡ್ಡಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 78, ದಿನಾಂಕ 18–02–2022.
7. ಮಂಗಳಮ್ಮ (ಸೋಲಿಗ), ಕಾಳಿಕಾಂಬ ಕಾಲೋನಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 48, ದಿನಾಂಕ 16–01–2022.
8. ವೀರಮ್ಮ (ಸೋಲಿಗ), ಬೊಮ್ಮನನಂಜನ ಪೋಡು, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 85 ದಿನಾಂಕ : 05–10–2016.

**ಪರಾಮರ್ಶನ ಗ್ರಂಥಗಳು**

1. ಚಂದ್ರುಕಾಳೇನಹಳ್ಳಿ, ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993
2. ನಾಗರಾಜಪ್ಪ ಎಚ್, ಅಳಿವಿನಿಂಚಿನಲ್ಲಿರುವ ಬುಡಕಟ್ಟು ಪ್ರವೃತ್ತಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,2019
3. ಬೋರಲಿಂಗಯ್ಯ ಹಿ.ಚಿ (ಡಾ.), ಬುಡಕಟ್ಟು ದೈವಾರಾಧನೆ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 2000
4. ಮಹೇಶ್, ಆರ್, ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಜಾನಪದ, ಪಿಎಚ್.ಡಿ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2018
5. ವೀರಣ್ಣ ಎಂ.ಡಿ, ಗಿರಿಜನರ ವೈದ್ಯಪದ್ಧತಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2016